ಅಂದ್ರೆ ಒಂದು ಮಜಾ ನೋಡಿ. ಈ ಮುಳ್ಳುಗಳು ಇಲ್ಲದಿರೋ ವಾಚು, ನನಗೆ ಅಷ್ಟು ಇಷ್ಟ ಆಗಲ್ಲ. ಹಾಹಾ ಯಾಕೆ ಈ ಮನುಷ್ಯ ಬೆಳಗ್ಗೆ ಬೆಳಗ್ಗೆ ತಲೆ ಕೊರಿತಿದ್ದಾನೆ ಅಂತೀರೇನು" ಎಂದು ನಕ್ಕರು, ವೆಂಕಟ್ ಅವರು ಪ್ರತಿಕ್ರಿಯೆ ನೀಡುವ ಮೊದಲೇ.

ಸಾಹೇಬರು ಅವರ ಪಿ.ಎ ಸುಬ್ಬು ಅವರನ್ನು ಕರೆದು, ''ರೀ ಸುಬ್ಬು, ನೀವು ಸ್ವಲ್ಪನಾದ್ರು ವೆಂಕಟ ಅವರಿಗೆ ಬದುಕೋದು ಹೇಳಿಕೊಡ್ರಿ, ಮೂವತ್ತು ಸಾವಿರದ ವಾಚ್ ಅದು, ಏನು ಅಲ್ಲ ಅನ್ನೋ ರೀತಿಯಲ್ಲಿ ತಿರಸ್ಕರಿಸಿ ಬಿಟ್ರು. ಅಲ್ರಿ ನಿಮಗೆ ಎಷ್ಟು ವರ್ಷ ಸರ್ವಿಸು'' ಎಂದರು.

ಸುಬ್ಬು, ''ಐದು ವರ್ಷ ಸರ್'' ಅಂದರು.

ಮಂತ್ರಿಗಳು ಮತ್ತೆ, ''ಎಷ್ಟು ಮನೇ ಮಾಡಿದ್ದೀರಿ, ಬೆಂಗಳೂರಲ್ಲಿ'' ಎಂದು ಕೇಳಿದರು. ಅದಕ್ಕೆ ಅವರು, ''ನಿಮಗೆ ಗೊತ್ತಿಲ್ಲದೇ ಇರೋದು ಏನಿದೆ ಸರ್'' ಎಂದು ಹಲ್ಲು ಕಿರಿದು, ''ಅಮ್ಮಾವರು ನಿಮ್ಮನ್ನ ತಿಂಡಿಗೆ ಬರೋಕೆ ಹೇಳಿದರು" ಎಂದು ಮಾತು ಬದಲಿಸಿದರು.

''ಸರಿ ಸರಿ, ಇವತ್ತು ಫಸ್ಟ್ ಕ್ಲಾಸ್ ಬಾದಾಮ್ ಹಲ್ವಾ ಮಾಡಿದ್ದಾರೆ. ನೀವು ತೊಗೊಳ್ಳಿ, ನಾನು ಈಗ ಬಂದೆ, ವೆಂಕಟ್ ಅವರೊಟ್ಟಿಗೆ ಸ್ವಲ್ಪ ಮಾತಾಡೋದು ಇದೆ'' ಎಂದು ಸುಬ್ಬು ಅವರನ್ನ ಸಾಗ ಹಾಕಿದರು.

''ರೀ ವೆಂಕಟ್, ಅಲ್ರಿ ನಿಮ್ಮ ಡ್ರೈವರ್ ಇದನಲ್ಲ ಮಾದೇವು, ನಾಲ್ಕು ಮನೆ ಮಾಡಿದ್ದಾನೆ, ಎರಡು ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆ ತಿಂತಾ ಇದ್ದಾನೆ, ನಿಮ್ಮಂತೋರು ಎಲ್ಲಿ ಸಿಗ್ತಾರೆ ಇವಾಗ. ನೀವು ಸ್ವಲ್ಪ ಇವರಿಗೆಲ್ಲ ಬುದ್ಧಿ ಮಾತು ಹೇಳ್ರಿ."

''ಎಲ್ಲಿ ಸರ್, ನಮ್ಮ ಮಕ್ಕಳೇ ನಮ್ಮ ಮಾತು ಕೇಳೋಲ್ಲ ಇನ್ನು ಬೇರೆಯವರು ಕೇಳ್ತಾರ?'' ಎಂದು ನಕ್ಕು, ''ಸರ್, ನಾಡಿದ್ದು ಶಾಂತವೇರಿ ಗೋಪಾಲ ಗೌಡರ ಜನ್ಮ ದಿನ. ಅವರ ಕುರಿತು ಅಂಕಣ ಬರೆದುಕೊಡುತ್ತೀನಿ ಅಂತ 'ಕನ್ನಡವಾಣಿ' ಸಂಪಾದಕರಿಗೆ ನೀವು ಹೇಳಿದ್ದರಂತೆ. ಜೊತೆಗೆ, ಆವತ್ತು ಟೌನ್‌ಹಾಲ್‌ನಲ್ಲಿ ಅವರ ಕುರಿತು ನಿಮ್ಮ ಭಾಷಣ ಕೂಡ ಇದೆ. ಅಂಕಣ ಮತ್ತು ಭಾಷಣಕ್ಕೆ ಸಣ್ಣ ಟಿಪ್ಪಣಿ ಬರೆದುಕೊಂಡು ಬಂದಿದ್ದೀನಿ. ನೀವೊಮ್ಮೆ ನೋಡಿ ಹೇಳಿದರೆ ಪ್ರೆಸ್ಸಿಗೆ ಕಳಿಸ್ತೀನಿ" ಎಂದರು.

ಸಾಹೇಬರು, ''ಸರಿ ಹೋಯ್ತು, ಅಲ್ರಿ ಅವರು ನಮಗೆ ಗುರುಗಳು, ಅವರ ಕುರಿತು ಭಾಷಣ ಬರೆಸಿಕೊಂಡು ಓದುವಷ್ಟು ಇನ್ನು ಹದಗೆಟ್ಟಿಲ್ಲ ಕಣ್ರೀ. ಅವರ ಕುರಿತು ಒಂದು ಗಂಟೆಯಲ್ಲ ಎರಡು ದಿನ ಬೇಕಾದ್ರೆ ನಿರಂತರವಾಗಿ ಮಾತಾಡ್ತೀನಿ, ಸರಿ ಕೊಡಿ ಅದನ್ನ" ಎಂದು ಹೇಳಿ, ಅದನ್ನೊಮ್ಮೆ ಪರೀಕ್ಷಿಸಿ, ''ನಿಮ್ಮ ಕೆಲಸ ಸರಿಯಾಗೇ ಇರುತ್ತೆ, ನಾವು ಸುಮ್ಮನೆ ನೋಡಿದ ಹಾಗೆ ಶಾಸ್ತ್ರ ಮಾಡಿದ್ದು, ಅಷ್ಟೇ'' ಎಂದು ನಗುತ್ತಾ ಮಾತು ಮುಂದುವರೆಸಿದರು. ''ನಮ್ಮ ದೇಶದಲ್ಲಿ ಸಮಾಜವಾದದ ಜ್ಯೋತಿಯನ್ನ ಬೆಳಗಿದವರು ಲೋಹಿಯಾ, ಜೇಪಿ, ಕರ್ನಾಟಕದಲ್ಲಿ ಆ ಬೆಳಕನ್ನ ನಮ್ಮ ಮನಸಿನಲ್ಲಿ ಮೂಡಿಸಿದವರು ನಮ್ಮ ಗೋಪಾಲ ಗೌಡರು. ಅವರನ್ನು ಅನುಸರಿಸಿದವರು ನಾವೆಲ್ಲ. ಈಗ ನೋಡಿ, ನಾವು ಕೂಡ ರಾಜಕಾರಣದ ಕೆಸರಿನಲ್ಲಿ ಕೊರಳಿನ ತನಕ ಮುಳುಗಿದ್ದೀವಿ. ಇವತ್ತು ಅವರೇನಾದ್ರೂ ಇದ್ದಿದ್ರೆ, ಇವತ್ತಿನ ರಾಜಕೀಯ ನೋಡಿ ಹೇಸಿಗೆ ಪಟ್ಟಿಕೊಳ್ಳುತ್ತಿದ್ದರು. ನಾವು ಅದೇ ಕೆಸರಿನಲ್ಲಿ ಇದ್ದರೂ ಸಾಧ್ಯವಾದಷ್ಟು ಕ್ಲೀನ್ ಆಗಿ ಇದ್ದಿವಿ. ಏನಂತೀರಾ, ಇದೊಂದು ಮಾಯೆ. ಇದರಲ್ಲಿ ಸಿಕ್ಕಿಹಾಕಿಕೊಂಡವರು ಸೆಕೆಂಡಿನ ಮುಳ್ಳಿನ ಹಾಗೆ ಓಡುತ್ತಿರಬೇಕು, ನಿಂತರೆ ಕೆಟ್ಟೆವು" ಎಂದು ನಕ್ಕರು.

''ನಿಮಗೆ ಈ ವಾಚಿನ ಗೀಳು ಹೇಗೆ ಅಂಟಿಕೊಂಡಿತು ಸರ್'' ಎಂದು ವೆಂಕಟ್ ಕೇಳಿದರು.

''ಅದೊಂದು ಕಥೆ'' ಎಂದು ತಮ್ಮ ವಾಚನ್ನು ನೋಡಿಕೊಂಡು, ''ಇನ್ನು ಸಮಯ ಇದೆ, ಹೇಳ್ತಿನಿ ಕೇಳಿ'' ಎನ್ನುತ್ತ, ''ನಲವತ್ತು ವರ್ಷಗಳ ಹಿಂದಿನ ಮಾತು, ಆಗ ನನಗೆ ಇಪ್ಪತ್ತು ವರ್ಷ. ನಮ್ಮೂರಿಗೆ ನಾನೊಬ್ಬನೇ ಇಂಟರ್‌ಮೀಡಿಯೇಟ್ ಪಾಸ್ ಮಾಡಿದ್ದು. ಮುಂದೆ ಓದಿಸೋಕೆ ಅಪ್ಪನಿಗೆ